ಗವಿಸಿದ್ಧ ಹೊಸಮನಿ ಅವರು ಮೂಲತಃ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಗೊರೆಬಿಹಾಳ ಗ್ರಾಮದವರು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪತ್ರಕರ್ತರಾಗಿ ಕೆಲಸ ಮಾಡಿದವರು. ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿ ವಾರ್ತಾ ಮತ್ತು ಸಂಪರ್ಕ ಇಲಾಖೆಯಲ್ಲಿ ಜಿಲ್ಲಾ ವಾರ್ತಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಬಿಳಿಸೀರೆಯ ದಾದಿಯೊಬ್ಬಳು ಸಂಗಮ್ಮಳ ಮನೆಗೆ ಬಂದು 'ಬೇ ಮುದ್ಕಿ ಊರಾಗ ಡೆಂಗೆ ಫೀವರ್ರೈತಿ... ಜ್ವರಾ ಬಂದಾವು ಹುಡುಗನ ಹೆಲ್ಥ ಬಗ್ಗೆ ಕೇರ್ ಮಾಡು!' ಎಂದನ್ನುತ್ತ ಕಂಗ್ಲೀಷ್ ಮಾತುನಾಡಿ ತನ್ನ ಕರಿ ಬ್ಯಾಗಿನಿಂದ ಯಾವುದೋ ಬೂದುಬಣ್ಣದ ಎರಡು ಗುಳುಗೆ ನೀಡಿ ಹೋಗಿದ್ದಳು.

ಡೆಂಗೆ, ಹೆಲ್ತ್, ಫೀವರ್ ಇದ್ಯಾವುದು ಗೊತ್ತಾಗುದೇ ಜ್ವರ ಎಂಬುದಷ್ಟೇ ಗೊತ್ತಾಗಿ 'ಆತ ಎವ್ವಾ ಜ್ವಾಕಿದಿಂದ ಬರ್ತೀನಿ' ಅಂತ ಯಾವಾಗಲೋ ಒಮ್ಮೆ ಬರುತ್ತಿದ್ದ ದಾದಿಗೆ ಸಂಗಮ್ಮ ಹೇಳಿತ್ತಾದರೂ ದಾದಿ ಬಂದು ಹಾಗೆ ಹೇಳಿ ಹೋದ ಕ್ಷಣದಿಂದ ಸಂಗಮ್ಮ ಮೊದಲಾಗಿ ಇಡೀ ಊರಿಗೆ ಊರೇ ಜ್ವರದಿಂದ ಭಯಗೊಂಡಿದ್ದರೂ ದಾದಿಯೊಬ್ಬಳು ಅಲ್ಲಿಗೆ ಬಂದದ್ದು ಬಿಟ್ಟರೆ ಸಂಬಂಧಿಸಿದ ಮತ್ತಾರೂ ಅತ್ತ ಲಕ್ಷ್ಯ ವಹಿಸಿರಲಿಲ್ಲ. ಜ್ವರದಿಂದಾಗಿ ಮಾರನು ಘಳಿಗೆ-ಘಳಿಗೆಗೊಮ್ಮೆ ಚಡ್ಡಿ ಉಚ್ಚುತ್ತಲೇ, ತಿಣುಕುತ್ತಲೇ ಸಂಗಮ್ಮ 'ಯಾರರ ಬರ್ರೆಪೋ... ಕೆಟ್ವಾ ಜ್ವರಾ ಬಂದಾವ ಬರ್ರೆಪೊ... ತೋರುಸ್ರಿ ಅವುಗ' ಅಂತ ಆಗಾಗ ಅನ್ನುತ್ತಿರುವಾಗಲೇ ವಾರೊಪ್ಪತ್ತಿನಲ್ಲಿ ಜ್ವರ ತಲೆಗೇರಿ ನೆಟೇಗಣ್ಣು ಹಾಕಿದ್ದ ಮಾರನ ಉಸುರು ನಿಲ್ಲುತ್ತಲೇ ಊರ ಜನರು ಲೊಚುಗುಟ್ಟದ್ದರು. ಆ ಕ್ಷಣದಿಂದಲೇ ಸಂಗಮ್ಮಳ ಗುಡುಸಲಿಗೆ ಕತ್ತಲು ಹೊಕ್ಕಿತ್ತು. ತನ್ನ ಪ್ರೀತಿಯ ಮಾರನು ಸತ್ತ ಕ್ಷಣದಿಂದಲೇ ತನ್ನಜೀವ ಮಣ್ಣು ಸೇರಿತೆಂದೇ ನೊಂದಿದ್ದ ಸಂಗಮ್ಮಳು ಮತ್ತದೇ ಬಾವಿ ಕಟ್ಟೆಯಲ್ಲಿ ತಳವೂರಿದಳು. ಅಲ್ಲಿ ಕುಳಿತು 'ಮಾರಪ್ಪ ಮಾರಪ್ವಾ' ಎಂದು ಪೇಚಿಡುತ್ತಿದ್ದಳು. ಯಾರಾದರೂ ಬಾವಿ ಹತ್ತಿರ ಕಾಣುತ್ತಲೇ 'ನಮ್ಮ ಮಾರಪ್ಪನ ನೋಡಿರನು ಎಪ್ವಾ' ಅಂತನ್ನುತ್ತಿದ್ದಳು. ಗುಡುಸಲೇ ಅದುರುವಂತೆ ಬಳುಬಳು ಕಣ್ಣೀರಿಡುತ್ತಿದ್ದಳು.

* * *

ಡೆಂಗೆ ಜ್ವರುದಿಂದ ತನ್ನೂರ ಹುಡುಗನೊಬ್ಬ ಸತ್ತ ಸುದ್ದಿಯನ್ನು ನೋಡುತ್ತಲೇ ತಳುಮಳುಗೊಂಡಿದ್ದ ಲಾಯರು ದುರುಗಪ್ಪ ಅರ್ಥಾಥ ದುರಗನು ಪಟ್ಟಣದಿಂದ ಅವತ್ತು ತನ್ನೂರಿಗೆ ಬಂದು ನಾಕಾರು ಜನರೊಂದಿಗೆ ಮಾತಿಗಿಳಿದಿದ್ದನು. ತನ್ನ ಮನೆಯಿಂದ ಗಾವೂದ ದೂರದಲ್ಲಿದ್ದ ಸಂಗಮ್ಮಳ ಗುಡಿಸಲತ್ತ ಹೋದನು. ಲೆಕ್ಕಿ ತಪ್ಪಲಿನ ಸಂಗಮ್ಮಳ ಗುಡಿಸಲಿನಲಿ ಅಡುಗೋಡೆಯ ಮೇಲಿನ ಚಿಮಣಿ ಬುಡ್ಡಿ ಬಿಕ್ಕುತೊಡಗಿತ್ತು. ದುರಗನು ಚೂರು ಜಂಗು ಹತ್ತಿದ ತಗುಡಿನ ಬಾಗುಲ ಸರಿಸಿ ಮೆಲುದನಿಯಲಿ 'ಸಂಗಮ್ಮಾ' ಎಂದು ಅನ್ನುತ್ತಲೇ.. 'ಯಾರು ಮಾರಪ್ಪನು...' ಎಂದು ಕಣ್ತುಂಬ ನೀರು ತಂದಿತ್ತು ಸಂಗಮ್ಮ. ಅದನ್ನು ಕಂಡು ದುರುಗನ ಕಣ್ಣೆವೆಯಲ್ಲೂ ನೀರು ತೊಟ್ಟಿಕ್ಕಿತ್ತು.

ದುರಗನು, 'ಎಮ್ಮಾ ನಾನು ದುರಗಪ್ಪ ವಕೀಲಬೇ' ಅಂದಾಗ, 'ಅಯ್ಯ ದುರಗಪ್ಪನು ಬಾರಪ್ಪೋ... ಎಪ್ಪಾ.. ನಿನ್ನ ಜೊತಿಗೆ ಮಾತಾಡದಿತ್ತು ಎಪ್ಪಾ... ನೀನಾ ಬಂದೀದಿ ಈಗ ಎಪ್ಪಾ... ನನ್ನ ಮಗ್ಗ ಅಕ್ಕವ್ವ ಐತೆಲ್ಲಾ ಅದು ನನ್ನ ಗನಮಕ್ಕ ಸಮಾನಪ್ಪೊ. ಆದ್ರ ಬದಕಿಗೆ ಎಳ್ಳಾಕಿನ ಸುಖಾ ಇಲ್ಲಾ. ಅದ್ಕ ಆಕಿ ಮಗನ್ನ ಇಲ್ಲೆ ಇಟ್ಗೊಂಡಿದ್ಯಾ. ಜ್ವರ ಜ್ವರ ಅಂತ ಬಡ್ಕೊಂಡ್ರೂ ಅವು ತೋರಸಲಿಲ್ಲಪ್ಪೊ. ಎಪ್ಪಾ ಅಕ್ಕವ್ವನ ಬಾಳೆವು ಸಜ್ಜಿಲ್ಲಾ, ಆಕಿ ಹೆಸರಿಗೆ ಎಕ್ರೆನರ ಹೊಲಾ ಸಿಗುವಂಗ ಮಾಡಪ್ಪೊ. ನೀನು ಪಟ್ಟಣದಾಗ ಇರ್ತಿ... ನಿಂಗಾ ಕಾಯ್ದೆ-ಕಾನೂನು ಗೊತ್ತಿರುತ್ತ ಈ ಕಡೆ ಸ್ವಲ್ಪ ಲಕ್ಷ್ಯ ವಹಿಸಪ್ಪೋ' ಎಂದು ಸಂಗಮ್ಮಳು ಥೇಕುತ್ತಲೇ ಒಂದೇ ಉಸಿರಿನಲ್ಲಿ ಎಲ್ಲವನ್ನು ಹೇಳಿದಾಗ ದುರಗನು 'ಹೂಂ' ಎಂದು ಅವಳ ಕೈಮುಟ್ಟಿ ಧೈರ್ಯ ಹೇಳಿ ಬಂದಿದ್ದನು.

* * *

ಸಂಗಮ್ಮಳ ದೂರದ ಸಂಬಂಧಿಯೂ ಆಗಿದ್ದ ದುರುಗನು ಕಾನೂನು ಪದುವಿ ಓದಿ ವಕೀಲಿ ವೃತ್ತಿಯಲ್ಲಿದ್ದನು. ನ್ಯಾಯದ ಪರ ಸದಾ ವಕಾಲತ್ತು ವಹಿಸುತ್ತಿದ್ದರಿಂದ ಇವುನನ್ನು ಕಂಡರೆ ಊರ